ಶ್ರೀ ಗೋವಿಂದ ಕಾರಜೋಳ:– ಮಾನ್ಯ ಅಧ್ಯಕ್ಷರೆ, ಕೃಷಿ ಭೂಮಿಗೆ ನೀರು ಒದಗಿಸತಕ್ಕದ್ದನ್ನು ಮಾತ್ರ ನಮ್ಮ ಇಲಾಖೆ ಮಾಡುತ್ತದೆ. ಕುಡಿಯುವ ನೀರಿಗೆ ಸಂಬಂಧಪಟ್ಟಿದ್ದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಅವರಿಗೆ ನಾನು ಈ ಬಗ್ಗೆ ವಿನಂತಿ ಮಾಡುತ್ತೇನೆ.

ವಿಧವಾ ವೇತನದ ಬಗ್ಗೆ

43 ಶ್ರೀ. ಪ್ರಕಾಶ್ ಬಾಬಣ್ಣ ಹುಕ್ಕೇರಿ

ಶ್ರೀ.ಜಿ. ಕರುಣಾಕರ ರೆಡ್ಡಿ. (ಕಂದಾಯ ಸಚಿವರು)

ಅ) ಚಿಕ್ಕೋಡಿ ಸದಲಗ ಮತಕ್ಷೇತ್ರ ವ್ಯಾಪ್ತಿಯಲ್ಲಿರುವ ವಿಧವೆಯರ ಸಂಖ್ಯೆಯೆಷ್ಟು; ಆ ಪೈಕಿ ಎಷ್ಟು ವಿಧವೆಯರಿಗೆ ಸರ್ಕಾರದ ಯಾವ ಯೋಜನೆಯಡಿ ಮಾಸಿಕ ಸಹಾಯ ಧನ ನೀಡಲಾಗುತ್ತಿದೆ(ವಿವರ ನೀಡುವುದು);

ಈ ಬಗ್ಗೆ ಯಾವುದೇ ಸಮೀಕ್ಷೆ ಕೈಗೊಳ್ಳದಿರುವುದರಿಂದ ನಿಖರವಾದ ಮಾಹಿತಿ ಲಭ್ಯವಿರುವುದಿಲ್ಲ.

ಚಿಕ್ಕೋಡಿ ಸದಲಗ ಮತಕ್ಷೇತ್ರ ವ್ಯಾಪ್ತಿಯಲ್ಲಿ 3412 ವಿಧವೆಯರಿಗೆ ನಿರ್ಗತಿಕ ವಿಧವಾ ವೇತನದಡಿ ಮಾಸಿಕ ಸಹಾಯ ಧನ ನೀಡಲಾಗುತ್ತಿದೆ.

ಆ) ಸದರಿ ವಿಧವಾ ಫಲಾನುಭವಿಗಳ ಆಯ್ಕೆಯ ' ಮಾನದಂಡನೆಗಳೇನು; ಇನ್ನುಳಿದ ವಿಧವೆಯರಿಗೆ ಎಂದಿನಿಂದ ಮಾಸಿಕ ಸಹಾಯ ಧನವನ್ನು ನೀಡಲಾಗುವುದು?

ಅರ್ಜಿದಾರಳು 18 ವರ್ಷಕ್ಕಿಂತ ಹೆಚ್ಚು ವಯಸ್ಸಿನ ನಿರ್ಗತಿಕ ವಿಧವೆಯರಾಗಿದ್ದು, ರೂ 6000/–ಗಳಿಗೆ ಮೀರದ ವಾರ್ಷಿಕ ಆದಾಯವನ್ನು ಹೊಂದಿರಬೇಕು. ಅರ್ಜಿದಾರಳು ಅಥವಾ ಆಕೆಯ ಮರಣ ಹೊಂದಿದ ಪತಿಯು ಅರ್ಜಿ ಸಲ್ಲಿಸಿವ ದಿನಾಂಕದಿಂದ ಹಿಂದಿನ ನಿರಂತರ ಮೂರು ವರ್ಷಗಳ ಅವಧಿಗೆ ಕಡಿಮೆ ಇಲ್ಲದಂತೆ ಈ ರಾಜ್ಯದ ನಿವಾಸಿಯಾಗಿರಬೇಕು. ಇನ್ಯಾವುದೇ ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರಬಾರದು. ಮೃತರಾಗುವವರೆಗೆ ಅಥವಾ ಪುನರ್ವಿವಾಹ ಆಗುವವರೆಗೆ, ಉದ್ಯೋಗ ಪಡೆದು ವಾರ್ಷಿಕ ಆದಾಯ ರೂ.6000/– ಕ್ಕಿಂತ ಹೆಚ್ಚಿಗೆ ಪಡೆಯುವವರೆಗೆ ವಿಧವಾ ವೇತನವನ್ನು ಪಡೆಯಬಹುದು.

ಜನನ ಪ್ರಮಾಣ ಪತ್ರ, ವೈದ್ಯಕೀಯ ದೃಢೀಕರಣ ಪತ್ರ ಅಥವಾ ಭಾರತ ಚುನಾವಣಾ ಆಯೋಗವು ನೀಡಿರುವ ಮತದಾರರ ಗುರುತಿನ ಚೀಟಿಯಲ್ಲಿರುವ ಜನ್ಮ ದಿನಾಂಕವು ವಯಸ್ಸಿಗೆ ಸಂಬಂಧಿಸಿದ ದಾಖಲೆಯಾಗಿರುತ್ತದೆ.

ಯೋಜನೆಯಡಿ ಅರ್ಹ ನಿರ್ಗತಿಕ ವಿಧವೆಯರು ಅರ್ಜಿಯನ್ನು ಸಲ್ಲಿಸಿದ ನಂತರ ನಿಯಮಾವಳಿಗಳ ಪ್ರಕಾರ ಮಾಸಾಶನ ಮಂಜೂರು ಮಾಡಲಾಗುವುದು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ :– ಮಾನ್ಯ ಅಧ್ಯಕ್ಷರೆ, ವಿಧವಾ ವೇತನ ಪಡೆಯಲು ವಾರ್ಷಿಕ ಆದಾಯ 6 ಸಾವಿರ ರೂ.ಗಳನ್ನು ಮೀರಬಾರದು ಎಂದು ಇದೆ. ಸಂಧ್ಯಾ ಸುರಕ್ಷಾ ಯೋಜನೆ ಅಡಿಯಲ್ಲಿ ಫಲಾನುಭವಿಗಳಾಗಲು ವಾರ್ಷಿಕ ಆದಾಯ 20 ಸಾವಿರ ರೂ.ಗಳನ್ನು ಮೀರಬಾರದು ಎಂದು ಇದೆ. ವಿಧವಾ ವೇತನ ಪಡೆಯಲು ನಿಗದಿಪಡಿಸಿರುವ 6 ಸಾವಿರ ರೂ.ಗಳ ವಾರ್ಷಿಕ ಆದಾಯದ ಮಿತಿಯನ್ನು ಬದಲಾವಣೆ ಮಾಡಬೇಕೆಂದು ಆಗ್ರಹಿಸುತ್ತೇನೆ. ಈಗ ಉದ್ಯೋಗ ಖಾತ್ರಿ ಯೋಜನೆಯಲ್ಲಿ 100 ದಿವಸಗಳ ಕಾಲ ಕೆಲಸ ಮಾಡಿದರೆ, ಒಬ್ಬ ವ್ಯಕ್ತಿಗೆ 8,200 ರೂ.ಗಳ ವೇತನ ಸಿಗುತ್ತದೆ. ವಾರ್ಷಿಕ ಆದಾಯ ಮಿತಿಯನ್ನು 6 ಸಾವಿರ ರೂ.ಗಳಿಗೆ ನಿಗದಿಪಡಿಸಿರುವುದು ಅತಿ ಕಡಿಮೆ ಎನಿಸುತ್ತದೆ. ಆದ್ದರಿಂದ ದಯವಿಟ್ಟು ವಿಧವಾ ವೇತನ ಪಡೆಯಲು ಅರ್ಜಿ ಹಾಕುವವರಿಗೂ ಸಹ ವಾರ್ಷಿಕ ಆದಾಯ ಮಿತಿಯನ್ನು 20 ಸಾವಿರ ರೂ.ಗಳಿಗೆ ಏರಿಸಿದರೆ ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಭಾವಿಸುತ್ತೇನೆ. ಅದರ ಬಗ್ಗೆ ಮಾನ್ಯ ಸಚಿವರು ಪರಿಶೀಲಿಸಬೇಕೆಂದು ಕೋರುತ್ತೇನೆ.

ಶ್ರೀ ಜಿ.ಕರುಣಾಕರ ರೆಡ್ಡಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವಾರ್ಷಿಕ ಆದಾಯದ ಮಿತಿ ಬಗ್ಗೆ ಇರುವ ವ್ಯತ್ಯಾಸದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಎಲ್ಲರಿಗೂ ಒಂದೇ ತರಹದ ವಾರ್ಷಿಕ ಆದಾಯ ಮಿತಿಯನ್ನು ನಿಗದಿಪಡಿಸಲು ಅಗತ್ಯ ಕ್ರಮಗಳನ್ನು ಜರುಗಿಸುತ್ತೇವೆಂದು ತಿಳಿಸಬಯಸುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ಆ) <u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>

ಶ್ರೀ ಸುರೇಶ್ ಕುಮಾರ್ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] :– ಮಾನ್ಯ ಅಧ್ಯಕ್ಷರೆ, ದಿನಾಂಕ 13ನೇ ಜುಲೈ 2009ರಂದು 3ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 71 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು :– ಮಂಡಿಸಲಾಯಿತು.

(ಅನುಬಂಧ – I)

3. <u>ಕಾರ್ಯದರ್ಶಿಯವರ ವರದಿ</u>

ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿ